

## ಹಳದಿ ತುತ್ತೂರಿ

ನೋಡಲು ಚಿಕ್ಕ ತುತ್ತೂರಿಯಂತೆ ಕಾಣುವ ಈ ಸುಂದರ ಹಳದಿ ಹೂವಿನ ವೈಜ್ಞಾನಿಕ ಹೆಸರು 'ಟೆಕೋಮಾ ಸ್ಟಾನ್ಸ್'. ಇಂಗ್ಲಿಷ್‌ನಲ್ಲಿ 'ಯೆಲ್ಲೋ ಟ್ರಂಪೆಟ್ ಬುಷ್' ಎಂದು ಕರೆಯುವ ಈ ಸಸ್ಯ ಅಮೆರಿಕ ಮೂಲದ್ದು.

ಇದರ ಎಲೆ, ಬೇರು ಮತ್ತು ಹೂವಿನ ಕಷಾಯವನ್ನು ಗಿಡಮೂಲಿಕೆ ಔಷಧವಾಗಿ ಬಳಸಲಾಗುತ್ತದೆ. ಗಾಯಗಳನ್ನು ತ್ವರಿತವಾಗಿ ಗುಣಪಡಿಸಲು ಹಾಗೂ ಹೊಟ್ಟೆಯ ಸೆಳೆತವನ್ನು ಗುಣಪಡಿಸಲು ಸಹಕಾರಿಯಾಗಿದೆ. ಸಕ್ಕರೆ ಕಾಯಿಲೆ, ಕ್ಯಾನ್ಸರ್, ಫಂಗಲ್, ಮೈಕ್ರೊಬಿಯಲ್ ಹಾಗೂ ಜೀರ್ಣಕ್ರಿಯೆ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲು ಈ ಸಸ್ಯವನ್ನು ಬಳಸಲಾಗುತ್ತದೆ. ಇದರ ಎಲೆಗಳನ್ನು ಹಾವಿನ ಕಡಿತಕ್ಕೆ ವಿಷ ನಿವಾರಕವಾಗಿ ಬಳಸಲಾಗುತ್ತದೆ. ಅಲಂಕಾರಿಕ ಸಸ್ಯವಾಗಿಯೂ ಬಳಕೆಯಲ್ಲಿದೆ.

## ಅಂಟು ತೊಗರಿ, ಬಲ ರಾಕ್ಷಸಿ

ಭಾರತ, ಶ್ರೀಲಂಕಾ ಮತ್ತು ಆಫ್ರಿಕಾದಲ್ಲಿ ಹೆಚ್ಚಾಗಿ ಕಂಡುಬರುವ ಈ ಸಸ್ಯದ ಹೆಸರು 'ಸಿಲೋನ್ ಸ್ವಾಂಪ್ ಮ್ಯಾಲೋ'. 'ಪಾವೋನಿಯಾ ಝೆಲಾನಿಕಾ' ಎಂಬ ವೈಜ್ಞಾನಿಕ ಹೆಸರಿನ ಇದನ್ನು ಸ್ಥಳೀಯವಾಗಿ 'ಅಂಟು ತೊಗರಿ', 'ಬಲ ರಾಕ್ಷಸಿ' ಎಂದು ಹೆಸರಿಸಲಾಗಿದೆ.

ಪ್ರಧಾನವಾಗಿ ಆಯುರ್ವೇದ, ಯುನಾನಿ ಮತ್ತು ಸಿದ್ಧ ಔಷಧೀಯ ಅಭ್ಯಾಸಗಳಲ್ಲಿ ಬಳಸಲಾಗುವ ಈ ಸಸ್ಯವನ್ನು ಕೀಲುನೋವು, ಸ್ನಾಯುನೋವು ಮತ್ತು ಉಸಿರಾಟದ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲು ಸಹ ಉಪಯೋಗಿಸಲಾಗುತ್ತದೆ. ಅತಿಸಾರ, ಡಿಸ್ಪೆಸಿಯಾ, ಹಸಿವಿನ ಕೊರತೆ ಮತ್ತು ಅಜೀರ್ಣದಂತಹ ಜೀರ್ಣಕಾರಿ ಸಮಸ್ಯೆಗಳಿಗೆ ಚಿಕಿತ್ಸೆಯಾಗಿ ಕೆಲಸ ಮಾಡುತ್ತದೆ. ಗೊನೋರಿಯಾ, ಸಿಫಿಲಿಸ್, ಕ್ಷಯ ಮತ್ತು ಕರುಳಿನ ಹುಳಗಳಂತಹ ಸೋಂಕುಗಳಿಗೆ ಔಷಧವಾಗಿಯೂ ಇದು ಬಳಕೆಯಲ್ಲಿದ್ದು, ಕುಷ್ಠರೋಗ, ತುರಿಕೆ, ರಿಂಗ್‌ವರ್ಮ್, ಡರ್ಮಟೈಟಿಸ್ ಮತ್ತು ಮೊಡವೆ ಹುಣ್ಣುಗಳಂತಹ ಚರ್ಮದ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಬಳಸಲಾಗುತ್ತದೆ. ಒತ್ತಡ, ಗಾಯದ ಡ್ರೆಸ್ಸಿಂಗ್, ಕಡಿತ ಮತ್ತು ಹುಣ್ಣುಗಳ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ.



## ವಡುವಾರದ ಮರ, ಎಡತರಿ

'ಚೈನೀಸ್ ಲ್ಯಾಂಟರ್ನ್ ಟ್ರೀ', 'ಕಲಹರಿ', 'ಕ್ರಿಸ್‌ಮಸ್ ಟ್ರೀ', 'ಸಿಕ್ಲೆಬುಷ್' ಹೀಗೆ ಥರಾವರಿ ಹೆಸರುಗಳಿಂದ ಕರೆಸಿಕೊಳ್ಳುವ ಇದರ ವೈಜ್ಞಾನಿಕ ಹೆಸರು 'ಡಿಕ್ರೋಸ್ಟಾಕಿಸ್ ಸಿನೇರಿಯಾ'. ವಡುವಾರದ ಮರ, ಎಡತರಿ ಎಂದು ಇಲ್ಲಿ ಸಾಮಾನ್ಯವಾಗಿ ಕರೆಯಲಾಗುತ್ತದೆ. ದಕ್ಷಿಣ ಆಫ್ರಿಕಾ ಮತ್ತು ಭಾರತದಲ್ಲಿ ಕಂಡುಬರುವ



ಇದನ್ನು ಸಂಧಿವಾತ, ಮಧುಮೇಹ, ಕೆಮ್ಮು, ಮೂತ್ರಪಿಂಡದ ಅಸ್ವಸ್ಥತೆಗಳು, ಗೊನೋರಿಯಾ, ಸಿಫಿಲಿಸ್, ಮಲೇರಿಯಾ, ಕ್ಷಯ ಮತ್ತು ಅಪಸ್ಮಾರ ಚಿಕಿತ್ಸೆಗಾಗಿ ಬಳಸಲಾಗುತ್ತದೆ. ಹಾವು ಕಡಿತ, ನೋವು, ಗಾಯಗಳು, ಹುಣ್ಣುಗಳು, ಸುಟ್ಟಗಾಯಗಳು, ಹಲ್ಲುನೋವು, ತಲೆನೋವು ಮತ್ತು ತುರಿಕೆ ಚಿಕಿತ್ಸೆಗಾಗಿ ಬಳಸಲಾಗುತ್ತದೆ.

ಮೂಗಿನ ಒಳ ಸೇರಿಸುವಿಕೆಯಲ್ಲಿ ಬಳಸುವ ಮೂಲಪುಡಿ ಅಸ್ತಮಾದ ಮೇಲೆ ಪರಿಣಾಮಕಾರಿ ಎನ್ನಲಾಗಿದೆ. ಇದರ ಕಷಾಯವನ್ನು ಕುಷ್ಠರೋಗ, ಕೆಮ್ಮು, ಜಂತುಹುಳು ನಿವಾರಕ, ಶುದ್ಧೀಕರಣ ಮತ್ತು ಬಲವಾದ ಮೂತ್ರವರ್ಧಕ ಮತ್ತು ವಿರೇಚಕವಾಗಿ ಬಳಸಲಾಗುತ್ತದೆ. ಮೂಳೆ ಮುರಿತಕ್ಕೆ ಚಿಕಿತ್ಸೆ ನೀಡಲು ಪುಡಿ ಮಾಡಿದ ಬೇರುಗಳು ಮತ್ತು ಎಲೆಗಳನ್ನು ಬಳಸಲಾಗುತ್ತದೆ. ಕುಡುಗೋಲು ಕಣ ರಕ್ತಹೀನತೆಗೆ ಚಿಕಿತ್ಸೆ ನೀಡಲು ಬಳಸಲಾಗುತ್ತದೆ. ಇದರ ತೊಗಟೆಯನ್ನು ತಲೆನೋವು, ಹಲ್ಲುನೋವು, ಭೇದಿ, ಆನೆಕಾಲು ರೋಗಗಳಿಗೆ ಬಳಸಲಾಗುತ್ತದೆ.



## ವಿಷ್ಣು ಕ್ರಾಂತಿ

ಇದರ ಇಂಗ್ಲಿಷ್ ಹೆಸರು 'ಸ್ಲೆಂಡರ್ ಡ್ವರ್ಫ್ ಮಾರ್ನಿಂಗ್ ಗ್ಲೋರಿ'. ವೈಜ್ಞಾನಿಕವಾಗಿ 'ಎವೋಲ್ವುಲಸ್ ಅಲ್ಸಿನಾಯ್ಡ್ಸ್' ಎಂದು ಕರೆಯಲಾಗುತ್ತದೆ. ಸಂಸ್ಕೃತದಲ್ಲಿ 'ಶಂಖಪುಷ್ಪ', 'ವಿಷ್ಣುಕ್ರಾಂತಿ' ಎಂದು ಹೆಸರಿಸಲಾಗಿದೆ. ಸ್ಮರಣಶಕ್ತಿ ಹೆಚ್ಚಿಸಲು, ನರ ಸಮಸ್ಯೆ ಮತ್ತು ಅಸ್ತಮಾ ಚಿಕಿತ್ಸೆಗಾಗಿ ಬಳಸಲಾಗುತ್ತದೆ. ಇದು ಆ್ಯಂಟಿಅಮ್ನೆಸಿಕ್, ಆ್ಯಂಟಿಡಿಪ್ರೆಸೆಂಟ್, ಆ್ಯಂಟಿಆಕ್ಸಿಡೆಂಟ್, ಆ್ಯಂಟಿಡಯಾಬಿಟಿಕ್, ಆ್ಯಂಟಿಫಂಗಲ್ ಮತ್ತು ಆ್ಯಂಟಿಮೈಕ್ರೊಬಿಯಲ್ ಗುಣಗಳನ್ನು ಹೊಂದಿದೆ. ಗಾಯ ಗುಣಪಡಿಸಲು, ಯಕೃತ್ತು ಮತ್ತು ಹೃದಯ ರಕ್ಷಣೆ ಔಷಧವಾಗಿ ಬಳಸಲಾಗುತ್ತದೆ.

## ಕತ್ತೆ ತುಂಬೆ, ಅಧೋಮುಖಿ

ಭಾರತ ಮತ್ತು ಹಿಮಾಲಯಗಳಲ್ಲಿ ಕಂಡುಬರುವ ಇದರ ಹೆಸರು 'ಇಂಡಿಯನ್ ಬೋರೇಜ್'. 'ಟ್ರೆಂಕೋಡೆಸ್ಮಾ ಇಂಡಿಕಮ್' ಎಂಬ ವೈಜ್ಞಾನಿಕ ಹೆಸರಿನ ಈ ಸಸ್ಯಕ್ಕೆ ಇಲ್ಲಿ 'ಕತ್ತೆ ತುಂಬೆ', 'ಅಧೋಮುಖಿ' ಎಂಬ ಹೆಸರು.

ಜ್ವರವನ್ನು ಕಡಿಮೆ ಮಾಡಲು ಮತ್ತು ಚರ್ಮದ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಬಳಸಲಾಗುತ್ತದೆ.

